Clause 2

Mr. DEPUTY SPEAKER.—Now I will take up the Bill clause by clause. The question is:

"That clause 2 do stand part of the Bill."

The motion was adopted.

Clause 2 was added to the Bill.

Clause 1, etc.

Mr. DEPUTY SPEAKER.—The question is:

"That clause 1, the long Title the Preamble and the Enacting Firmula do stand part of the Bill."

The motion was adopted.

Clause 1, the long Title, the Preamble and the Enacting were added to the Bill.

MOTION TO PASS

Sri N. HUTCHAMASTHY GOWDA (Minister for Revenue).—I beg to move:

"That the Mysore Stamp (Amendment) Bill, 1972 be passed."

Mr. DEPUTY SPEAKER.—The question is:

"That the Mysore Stamp (Amendment) Bill, 1972 be passed."

The motion was adopted and the Bill was passed.

MYSORE COURT FEES AND SUITS VALUATION (AMENDMENT) BILL, 1972.

MOTION TO CONSIDER

Sri D. K. NAIKAR (Minister for Law and Parliamentary Affairs).—I beg to move:

"That the Mysore Courts Fees and Suits Valuation (Amendment) Bill, 1972 be taken into consideration."

Mr. DEPUTY SPEAKER.—Motion moved:

"That the Mysore Courts Fees and Suits Valuation (Amendment) Bill, 1972 be taken into consideration."

4-00 P. M.

ಶ್ರೀ ಡಿ. ಕೆ. ನಾಯಕರ್.—ಅಧ್ಯಕ್ಷರೇ, ಈ ಬಿಲ್ಲಿನ ಉದ್ದೇಶ ಹೇಳುವುದಾದರೆ ಈ ಬಿಲ್ಲು 1958ರಲ್ಲಿ ಪಾಸ್ ಆದಾಗ ರಿಟ್ ಪಿಟಿಷನ್‌ಗಳಿಗೆ 25 ರೂಪಾಯಿಗಳ ಫೀಸ್‌ನ್ನು ಕೊಡಬೇಕೆಂದು 226 ಮತ್ತು 228ರ ಆರ್ಟಿಕಲ್ ಪ್ರಕಾರ ನಿಗದಿ ಮಾಡಲಾಗಿತ್ತು. ಆದರೆ 1958ರಲ್ಲಿ ಇದ್ದಂಥ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಬಹಳ ವ್ಯತ್ಯಾಸವಾಗಿದೆ. ಅಲ್ಲದೆ ಜುಡಿಷಿಯಲ್ ಅಡ್ಮಿನಿಸ್ಟ್ರೇಷನ್‌ನಲ್ಲೂ ಕೂಡ ಕೆಲವೊಂದು ಮಟ್ಟಿಗೆ ಖರ್ಚು ಜಾಸ್ತಿಯಾಗಿದೆ. ಆದುದರಿಂದ ಹಿಂದಿನ ಸರ್ಕಾರ 1967ನೇ ಸಾಲಿನಲ್ಲಿ ಈ ವಿಷಯವನ್ನು ಎತ್ತಿಕೊಂಡು ಇದರ ಬಗ್ಗೆ ಚರ್ಚೆ ಮಾಡಿ ಕೋರ್ಟ್ ಫೀಸ್ ಹೆಚ್ಚು ಮಾಡಬೇಕು ಎನ್ನುವುದನ್ನು ತೀರ್ಮಾನ ಮಾಡಿದೆ. ಆ ಪ್ರಕಾರ 1969ನೇ ಸಾಲಿನಲ್ಲಿ ಈ ಬಿಲ್ ಅಧ್ಯಕ್ಷರ ಹುಕುಂ ಪ್ರಕಾರ ಪಬ್ಲಿಷ್ ಸಹ ಆಗಿತ್ತು. ಮುಂದೆ 1971ನೇ ಸಾಲಿನಲ್ಲಿ ಈ ಅಸೆಂಬ್ಲಿ ಡಿಸಾಲ್ವ್ ಆದ ಕಾರಣ ಈ ಬಿಲ್ಲು ಲ್ಯಾಪ್ಸ್ ಆಯಿತು. ಈ ರಿಟ್ ಪಿಟಿಷನ್‌ಗಳಿಗೆ 25 ರೂಪಾಯಿ ಫೀಸ್ ಇರುವುದರಿಂದ ನಾನ್ನಾಪಟ್ಟ ಕಾರಣಗಳಿಗೂ ಕೂಡ ಕೆಲವೊಂದು ಪಿಟಿಷನ್‌ಗಳು ಹೆಚ್ಚು ಹೆಚ್ಚಾಗಿ ಬರುವುದು ಪರಿಪಾಠವಾಗಿದೆ. ಇದು ಸಹಜವಾಗಿಯೇ ಇದೆ. ಈ ವಿಷಯವನ್ನು ಸರ್ಕಾರ ಗಮನಿಸಿತು. ಈ ಫೀಸ್‌ನ್ನು 100 ರೂಪಾಯಿಗಳಿಗೆ ಏರಿಸುವುದರಿಂದ ಅಧಿಕ ಸಂಖ್ಯೆಯಲ್ಲಿ ಬರುತ್ತಾ ಇರುವ ಕೇಸುಗಳು ಕಡಿಮೆಯಾಗುತ್ತದೆ ಮತ್ತು ಸಕಾರಣಗಳು ಇಲ್ಲದೇ ಇರುವಂಥ ಪಿಟಿಷನ್‌ಗಳು ಏನು ಬರುತ್ತಿತ್ತೋ ಅದೂ ಕೂಡ ಕಡಿಮೆಯಾಗುತ್ತದೆ. ಅಲ್ಲದೆ ನಮ್ಮ ನೆರೆ ರಾಜ್ಯವಾದ ಆಂಧ್ರ ಪ್ರದೇಶದಲ್ಲೂ ಕೂಡ 100 ರೂಪಾಯಿಯವರೆಗೆ ಈ ಫೀಸನ್ನು ಏರಿಸಿದ್ದಾರೆ. ಈ ಬಗ್ಗೆ ಇನ್ನೊಂದು ಮಾತು ಹೇಳುವುದಾದರೆ ಮಾನ್ಯ ಶ್ರೀ ಟಿ. ಆರ್. ಶಾಮಣ್ಣನವರು ಈ ಕೇಸುಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು, ಹೆಚ್ಚು ಬೆಳೆಸಬಾರದು ಎಂದು ನಿನ್ನೆ ಅವರು ಭಾಷಣ ಮಾಡಿದ್ದಾರೆ. ನಿನ್ನೆ ಅವರು ಹೇಳಿದ ಪ್ರಕಾರ ಅದಷ್ಟು ಕೇಸುಗಳು ಕಡಿಮೆ ಆಗುವ ರೀತಿಯಲ್ಲಿ ಮಾಡಬೇಕೆಂದು ಸರ್ಕಾರ ಆಸ್ಥೆ ವಹಿಸಿದೆ. ಆದುದರಿಂದ ರಿಟ್ ಪಿಟಿಷನ್‌ಗಳಿಗೆ ಈಗ ಇರತಕ್ಕ ಫೀಸನ್ನು 25 ರೂಪಾಯಿಗಳಿಂದ 100 ರೂಪಾಯಿಗಳಿಗೆ ಏರಿಸುವುದರಿಂದ ನಮ್ಮ ಅಭಿಪ್ರಾಯದ ಪ್ರಕಾರ ಅವರು ಹೇಳಿದಂತೆ ಕೇಸುಗಳು ಕಡಿಮೆಯಾಗುತ್ತದೆ ಎಂದು ಹೇಳುತ್ತೇನೆ. ಆ ಉದ್ದೇಶದಿಂದ ಈ ಬಿಲ್ಲು ಇದೆ. ಆದುದರಿಂದ ಈ ಬಿಲ್ಲನ್ನು ಪಾಸು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷರೇ, ನಮ್ಮ ನ್ಯಾಯ ಸಚಿವರು ಈ ಬಿಲ್ಲನ್ನು ಒಪ್ಪಿಕೊಳ್ಳಬೇಕು ಎಂದು ನಮ್ಮ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಇದು ನನಗೆ ಬಹಳ ಸೋಜಿಗವಾಗುತ್ತದೆ. ಈ ರಿಟ್ ಪಿಟಿಷನ್ಸ್ ಫೀಸ್‌ನ್ನು 25 ರೂಪಾಯಿನಿಂದ 100 ರೂಪಾಯಿಗೆ ಏರಿಸುವುದರಿಂದ ಕೋರ್ಟ್‌ಗೆ ಬರತಕ್ಕಂಥ ಪಿಟಿಷನ್‌ಗಳ ಸಂಖ್ಯೆ ಕಡಿಮೆಯಾಗುತ್ತದೆ ಎಂದು ಅವರು ಹೇಳಿದ್ದಾರೆ. ಅವನು ಕೋರ್ಟ್‌ಗೆ ಹೋಗುವುದು ನರಿಯಾದ ರೀತಿಯಲ್ಲಿ ನ್ಯಾಯ ದೊರಕಿಸಿಕೊಳ್ಳುವುದಕ್ಕೇ ವಿನಃ ದುಡ್ಡು ಖರ್ಚು ಮಾಡುವುದಕ್ಕೆ ಅಲ್ಲ. ಆದುದರಿಂದ ಅವನು ನ್ಯಾಯ ದೊರಕಿಸಿಕೊಳ್ಳಲು 25 ರೂಪಾಯಿ ಅಲ್ಲ 2 ಸಾವಿರ ರೂಪಾಯಿ ಬೇಕಾದರೂ ಖರ್ಚು ಮಾಡುತ್ತಾರೆ. ಆದರೆ ಸಮಾಜವಾದ ಸರ್ಕಾರ, ಬಡವರನ್ನು ಉದ್ಧಾರ ಮಾಡುತ್ತೇವೆ, ಎಂದು ಹೇಳುವ ಸರ್ಕಾರ ಈ ರೀತಿ 25 ರೂಪಾಯಿನಿಂದ 100 ರೂಪಾಯಿಗೆ ಈ ಫೀಸನ್ನು ಏರಿಸಿದರೆ ರಿಟ್ ಪಿಟಿಷನ್ಸ್ ಹೈಕೋರ್ಟ್‌ಗೆ ಬರುವುದು ಕಡಿಮೆಯಾಗುತ್ತದೆ ಎನ್ನುವ ಭಾವನೆ ಇದ್ದರೆ ಅದು ಯಾವ ರೀತಿಯಲ್ಲೂ ಕಡಿಮೆಯಾಗುವುದಿಲ್ಲ. ಹಿಂದೆ ಇದಕ್ಕೆ ಸ್ಟ್ಯಾಂಪ್ ಡ್ಯೂಟಿ 2 ರೂಪಾಯಿ ಮಾತ್ರ ಇತ್ತು. ಅನಂತರ 25 ರೂಪಾಯಿ ಮಾಡಿದರು. ಈಗ ಇಂದಿರಾ ಸರ್ಕಾರದವರು, ಬಡವರನ್ನು ಉದ್ಧಾರ ಮಾಡುವ ಸರ್ಕಾರದವರು ಜನಗಳಿಗೆ ಇರತಕ್ಕಂಥ ಹಕ್ಕುಭಾಧ್ಯತೆಗಳ ಬಗ್ಗೆ ಇರತಕ್ಕಂಥಾ ಅನುಕೂಲಗಳನ್ನು ಮೊಟಕು ಮಾಡುವ ಉದ್ದೇಶದಿಂದ 25 ರೂಪಾಯಿ ಇದ್ದುದನ್ನು 100 ರೂಪಾಯಿ ಮಾಡತಕ್ಕಂಥಾದ್ದು ಬಹಳ ಕೋಚನೀಯವಾದ ವಿಚಾರ. ಕೋರ್ಟ್‌ನಲ್ಲಿ ಈಗ ಬೇಕಾದಷ್ಟು ಪೆಂಡಿಂಗ್ ಕೇಸುಗಳು ಇವೆ, ಈಗ 100 ರೂಪಾಯಿ ಮಾಡಿ ಬಿಟ್ಟರೆ ಮುಂದೆ ಬರತಕ್ಕಂಥ ಅರ್ಜಿಗಳು ಕಡಿಮೆಯಾಗುತ್ತವೆ ಎನ್ನುವ ಭಾವನೆ ಇಟ್ಟುಕೊಂಡಿದ್ದಾರೆ. ಆದರೆ ಈಗ ಇರತಕ್ಕಂಥ ಚೀಫ್ ಜಸ್ಟೀಸ್ ಬರತಕ್ಕಂಥಾ ಕೇಸುಗಳನ್ನು ಆಡ್ಮಿಷನ್ ಸ್ಟೇಜ್‌ನಲ್ಲಿ ಎಷ್ಟೋ ಕೇಸುಗಳನ್ನು ತಳ್ಳಿ ಹಾಕಿಬಿಡುತ್ತಾರೆ. ಆದುದರಿಂದ ರಿಟ್ ಪೆಟಿಷನ್‌ಗಳ ಸಂಖ್ಯೆ ಎಷ್ಟೋ ಕಡಿಮೆಯಾಗಿದೆ. ಈಗ ರಿಟ್ ಪಿಟಿಷನ್‌ಗಳ ಸಂಖ್ಯೆ ಜಾಸ್ತಿಯಾಗುತ್ತದೆ ಎನ್ನುವುದಾದರೆ ಆ ವಿಚಾರದಲ್ಲಿ ಕಾಯಿದೆಯನ್ನೇ ತೆಗೆದು ಹಾಕಿಬಿಡಿ. ಆಗ ಯಾರೂ ಬರುವುದಿಲ್ಲ. ಸರಿಯಾಗಿ ಕೋರ್ಟ್‌ನಿಂದ ನ್ಯಾಯ ದೊರಕುತ್ತದೆ ಎನ್ನುವ ಉದ್ದೇಶಕ್ಕಾಗಿ ಈಗ ಜನ ಹೋಗುತ್ತಿದ್ದಾರೆ. ಹಾಗಿರುವಾಗ ಜನಗಳಿಗೆ ಸರಿಯಾದ ರೀತಿಯಲ್ಲಿ ನ್ಯಾಯ ದೊರಕಿಸಿ ಕೊಡುವುದು ಸರ್ಕಾರದ

(ಶ್ರೀ ಟಿ. ಆರ್. ಶಾಮಣ್ಣ)

ಕರ್ತವ್ಯವಲ್ಲವೇ ? ಕೋರ್ಟ್‌ನಲ್ಲಿ ಜನಗಳಿಗೆ ನ್ಯಾಯ ದೊರಕಿಸಿ ಕೊಡಬೇಕಾದ್ದು ಸರ್ಕಾರದ ಅದ್ಯ ಕರ್ತವ್ಯ ಎಂದು ನಾನು ಹೇಳುತ್ತೇನೆ.

ಈಗ ನಮ್ಮ ಬಜೆಟ್ಟನ್ನು ಪರಿಶೀಲನೆ ಮಾಡುವುದಾದರೆ ಈಗ ಸ್ಟ್ಯಾಂಪ್‌ನಿಂದ 7 ಕೋಟಿ ರೂಪಾಯಿ ವರಮಾನ ಬರುತ್ತದೆ ಮತ್ತು ಕೋರ್ಟಿನಿಂದ 34 ಲಕ್ಷ ರೂಪಾಯಿ ವರಮಾನ ಬರುತ್ತದೆ. ಕೋರ್ಟ್ ಎಸ್ಟಾಬ್ಲಿಷ್‌ಮೆಂಟ್‌ಗೆ ಖರ್ಚು ಮಾಡುವುದು 1 ಕೋಟಿ 20 ಲಕ್ಷ ರೂಪಾಯಿ ಆಗುತ್ತದೆ. ಕೋರ್ಟು ಇರುವುದು ಜನಗಳಿಗೆ ನ್ಯಾಯ ಒದಗಿಸುವುದಕ್ಕಾಗಿ. ಜನಗಳಿಗೆ ನ್ಯಾಯ ದೊರಕಿಸಿ ಕೊಡುವುದಕ್ಕೆ ಕೋರ್ಟು ಇರುವಾಗ, ಅವರಿಗೆ ಇರುವ ಸೌಲಭ್ಯವನ್ನು ಕಿತ್ತುಕೊಳ್ಳುವುದಕ್ಕೆ ಅಲ್ಲ, ಹಾಗಾದರೆ ಫ್ರೋಲೇಸಿನವರು ಏತಕ್ಕೆ ಇರಬೇಕು ? ಅವರೂ ಇರಕೂಡದು. ಅದರಿಂದ ವರಮಾನ ಹೆಚ್ಚು ಬರುವುದಿಲ್ಲ. ಅನೇಕ ಬಾರ್ ಅಸೋಷಿಯೇಷನ್‌ನವರು, ಅನೇಕ ಸಂಘಗಳು ಈ ರೀತಿ ಸರ್ಕಾರ ಮಾಡುತ್ತಾ ಇರುವುದು ಸರಿಯಾದುದಲ್ಲ ಎಂದು ಪ್ರೊಟೆಸ್ಟ್ ಮಾಡುತ್ತಿದ್ದಾರೆ ಇದನು ನೋಡಿದರೆ ಹಿಂದಿನ ಸರ್ಕಾರಕ್ಕಿಂತಲೂ ಉತ್ತಮವಾದ ಸರ್ಕಾರ ಇವರು ನಡೆಸುತ್ತಾರೆ ಎಂದು ಹೇಗೆ ಹೇಳುವುದಕ್ಕಾಗುತ್ತದೆ ? ಬಡ ಜನರಿಗೆ ಸಿಕ್ಕಬೇಕಾದ ಸೌಲಭ್ಯಗಳನ್ನು ಅವರಿಗೆ ಕಲ್ಪಿಸಿ ಕೊಡುವುದು ಸರ್ಕಾರದ ಅದ್ಯ ಕರ್ತವ್ಯವಲ್ಲವೇ ! ಹಿಂದೆ ಸರ್ಕಾರ ಏನು ಮಾಡುತ್ತಿತ್ತೋ ಅದೇ ರೀತಿ ಇವರೂ ಮಾಡುತ್ತಿದ್ದಾರೆ ಎನ್ನುವ ದೂರು ಅನೇಕ ಸಂಸ್ಥೆಗಳಿಂದ ಬಂದಿದೆ. ಈಗ ನೀವು ಅಧಿಕಾರಕ್ಕೆ ಬಂದಿದ್ದೀರಿ. ನೀವು ಸರಿಯಾದ ರೀತಿಯಲ್ಲಿ ನಡೆಯುವುದಾದರೆ ಒಂದು ಮಾದರಿ ಸರ್ಕಾರ ಎಂದು ಅನಿಸಿಕೊಳ್ಳುವುದಕ್ಕೆ ನಿಮಗೆ ಅರ್ಹತೆ ಇದೆ. ಅದನ್ನು ಯೋಚನೆ ಮಾಡಿ. ಹಿಂದೆ ಸ್ಟ್ಯಾಂಪ್ ಡ್ಯೂಟಿ ಕೇವಲ 2 ರೂಪಾಯಿ ಇದ್ದುದನ್ನು 25 ರೂಪಾಯಿ ಮಾಡಿದರು. ಈಗ ತಾವು 100 ರೂಪಾಯಿ ಮಾಡಿದ್ದೀರಿ, ಮುಂದೆ ಇದು 500 ರೂಪಾಯಿವರೆಗೂ ಹೋಗುತ್ತದೆ. ಇದರ ಬಗ್ಗೆ ಜನಗಳಿಗೆ ಅಸಮಾಧಾನವಾಗಿದೆ. ರಿಟ್ ಪಿಟಿಷನ್‌ನಲ್ಲಿ ಮುಖ್ಯವಾದ ಕರ್ತವ್ಯ ಅದರಲ್ಲಿ ಇರತಕ್ಕಂಥ ನ್ಯಾಯವನ್ನು ಜನಗಳಿಗೆ ದೊರಕಿಸಿ ಕೊಡಬೇಕಾದ್ದು. ಇದು ಸರ್ಕಾರದ ಅದ್ಯ ಕರ್ತವ್ಯ. ಇದರಿಂದ ಬರತಕ್ಕ ವರಮಾನ ಮುಖ್ಯವಲ್ಲ. ಕೋರ್ಟ್‌ಗಾಗಿ 1 ಕೋಟಿ 20 ಲಕ್ಷ ರೂಪಾಯಿ ಖರ್ಚು ಆಗುವಾಗ ಇದರಿಂದ ಕೇವಲ ಸ್ವಲ್ಪ ದುಡ್ಡು ಮಾತ್ರ ಬರುತ್ತದೆ. ಮತ್ತು ಇದನ್ನು 100 ರೂಪಾಯಿಗೆ ಏರಿಸಿದ ಪಕ್ಷದಲ್ಲಿ ಕೋರ್ಟಿಗೆ ಬರುವ ರಿಟ್ ಪಿಟಿಷನ್ಸ್ ಕಡಿಮೆಯಾಗುತ್ತದೆ ಎನ್ನುವ ಭಾವನೆ ಇದ್ದರೆ ಅದು ಶುದ್ಧ ತಪ್ಪು. ನಾನು ಈಗಾಗಲೇ ಹೇಳಿದಂತೆ ಅನೇಕ ರಿಟ್ ಪಿಟಿಷನ್‌ಗಳು ಆಡ್ಮಿಷನ್ ಸ್ಟೇಜಿನಲ್ಲೇ ತಳ್ಳಿ ಹಾಕಿಬಿಡುತ್ತಾರೆ. ಅದುದರಿಂದ ಇದನ್ನು 25 ರೂಪಾಯಿನಿಂದ 100 ರೂಪಾಯಿಗೆ ಏರಿಸುವುದನ್ನು ಖಂಡಿತ ಮಾಡಕೂಡದು ಎಂದು ಹೇಳಿ ಈ ಬಿಲ್ಲನ್ನು ಪೂರ್ಣ ವಿರೋಧ ಮಾಡುತ್ತೇನೆ, ಮತ್ತು ಈ ಬಿಲ್ಲನ್ನು ನಿರಾಕರಿಸ ಬೇಕಾಗುತ್ತದೆ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಬಿ. ಚನ್ನಪ್ಪ (ಮಾಗಡಿ).—ಮಾನ್ಯ ಅಧ್ಯಕ್ಷರೇ ಈ ವಿಷಯದಲ್ಲಿ ಮಾತನಾಡುವುದಕ್ಕೆ ಅನುಮತಿ ಕೊಟ್ಟಿದ್ದಕ್ಕಾಗಿ ಮೊಟ್ಟಮೊದಲನೆಯದಾಗಿ ತಮಗೆ ವಂದಿಸುತ್ತೇನೆ. ಈಗಾಗಲೇ ಜನತೆಯ ಮೇಲೆ ನಾನಾ ರೀತಿಯ ತೆರಿಗೆಯ ಹೊರೆ ಜಾಸ್ತಿಯಾಗಿ ಅವರ ಬೆನ್ನು ಕುಸಿದಿದೆ. ಈ ವಿಷಯ ಎಲ್ಲರಿಗೂ ಗೊತ್ತಿದೆ. ಎಲ್ಲಾ ಕ್ಷೇತ್ರಗಳಲ್ಲೂ, ಎಲ್ಲಾ ವ್ಯವಹಾರಗಳಲ್ಲೂ ಕೂಡ ತೆರಿಗೆಗಳು ದಿನೇ ದಿನೇ ಜಾಸ್ತಿಯಾಗಿ ಹೋಗುತ್ತಾ ಇವೆ. ಉದಾಹರಣೆಗೆ ಹೇಳಬೇಕಾದರೆ ಹಿಂದೆ ಅರು ಕಾಸಿಗೆ ಸಿಕ್ಕುತ್ತಿದ್ದ ಬೆಂಕಿಪೆಟ್ಟಿಗೆ ಈವೊತ್ತು 12 ಪೈಸೆ ಆಗಿದೆ. ಅದೇ ರೀತಿ ಸ್ಥಿತಿ ಯೊಂದು ಸಾಮಾನುಗಳ ರೇಟೂ ಕೂಡ ಜಾಸ್ತಿಯಾಗಿದೆ. ಇದರಿಂದ ಬಡವನ ಸ್ಥಿತಿ ಚಿಂತಾಜನಕ ವಾಗಿದೆ. ಕೋರ್ಟಿನಲ್ಲಿ ನಾವು ನ್ಯಾಯ ದೊರಕಿಸಿಕೊಳ್ಳುವುದು ಮುಖ್ಯವೇ ಹೊರತು ಆದಾಯ ಮುಖ್ಯವಲ್ಲ. ಬಡವನಿಗೆ ಅನ್ಯಾಯವಾಗಿದ್ದರೂ ಕೋರ್ಟು ಸ್ಟ್ಯಾಂಪ್ ಫೀ ಜಾಸ್ತಿಯಾದರೆ ಸ್ಟ್ಯಾಂಪ್ ಫೀಸ್ ಕೊಡುವುದಕ್ಕೆ ಶಕ್ತಿ ಇಲ್ಲದೆ ಕೋರ್ಟಿಗೆ ಹೋಗುವುದನ್ನು ಬಿಟ್ಟು ಏನು ಅನ್ಯಾಯ ವಾಗಿದ್ದರೂ ಕಷ್ಟದಿಂದ ಅನುಭವಿಸಿಕೊಂಡು ನರಳಿ ಸಾಯುವ ಪರಿಸ್ಥಿತಿ ಬರುತ್ತದೆ. ಈ ಸಂದರ್ಭದಲ್ಲಿ ಕೋರ್ಟು ಫೀ ವಿಷಯದಲ್ಲಿ 25 ರೂಪಾಯಿ ಇದ್ದದ್ದನ್ನು ಏಕ್‌ದಮ್ 100 ರೂಪಾಯಿ ಮಾಡಿ ತಕ್ಕದ್ದು. ಯಾವ ವಿಧದಲ್ಲೂ ಸಹಾಯವಾಗುವುದಿಲ್ಲ. ಫೀಸ್ ಕಡಿಮೆ ಇದ್ದರೆ ಕೇಸ್ ಜಾಸ್ತಿ ಬರುತ್ತವೆ. ತಾನಾಗೇ ಆದಾಯ ಬರುತ್ತದೆ. ಕೇಸುಗಳ ಸಂಖ್ಯೆ ಕಡಿಮೆಯಾದಾಗ ಆದಾಯ ಕುಗ್ಗುತ್ತದೆ. ಯಾವ ದೃಷ್ಟಿಯಿಂದಲೂ ಈ ಟ್ಯಾಕ್ಸ್ ಸಾಧುವಾಗಿ ಕಾಣುವುದಿಲ್ಲ. ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಈ ಟ್ಯಾಕ್ಸ್ ಹೆಚ್ಚು ಮಾಡುವು ದನ್ನು ನಿಲ್ಲಿಸಬೇಕು. ಆಗ ಬಡವರಿಗೆ ಸಹಾಯವಾಗಬಹುದು. ಬಡವ ಸ್ಟ್ಯಾಂಪ್ ಫೀ ಕೊಡುವುದಕ್ಕೆ

ಶಕ್ತಿ ಇಲ್ಲದೆ ನ್ಯಾಯಡೊರಕಿಸಿಕೊಳ್ಳುವುದಕ್ಕೆ ಕೋರ್ಟಿಗೆ ಹೋಗುವುದನ್ನೇ ಬಿಟ್ಟು ಅನ್ಯಾಯದಿಂದ ತೊಳಲುವ ಪರಿಸ್ಥಿತಿ ಬರುತ್ತದೆ. ಬಂಡವಾಳಶಾಹಿಗಳಿಗೆ ಅನುಕೂಲವಾಗುತ್ತದೆ. ಕೋರ್ಟು ಫೀ ಜಾಸ್ತಿಯಾದರೆ ಅವನಿಗೇ ಅನುಕೂಲವಾಗುತ್ತದೆ. ಹಣ ಇಲ್ಲದೆ ಇರುವವರಿಗೆ ಈ ಕಾನೂನಿಂದ ಅನುಕೂಲವಾಗುವುದಿಲ್ಲ. ದಯವಿಟ್ಟು ಇದನ್ನು ಹೆಚ್ಚಿಸಬಾರದೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಈಗ ಇರತಕ್ಕದ್ದನ್ನೂ ಇನ್ನೂ ಕಡಿಮೆ ಮಾಡಿದರೆ ಹೆಚ್ಚಿನ ಜನಗಳಿಗೆ ಅನುಕೂಲವಾಗುತ್ತದೆ. ಈ ಕಾನೂನಿಂದ ನ್ಯಾಯ ದೊರಕಿಸಿಕೊಳ್ಳುವುದಕ್ಕೆ ಅವಕಾಶವಿರಬೇಕು. ಅದಕ್ಕೆ ತಕ್ಕಂತೆ ಮೊದಲು ಕಾನೂನನ್ನು ಸಡಿಲಿಸಿಕೊಂಡು ಹೋಗಬೇಕೇ ಹೊರತು ಅದನ್ನು ಬಿಗಿ ಮಾಡಿಕೊಂಡು ಹೋಗಬಾರದು. ಹಾಗೆ ಮಾಡಿದರೆ ಅದರಿಂದ ಹೆಚ್ಚಿನ ಜನಗಳಿಗೆ ಪ್ರಯೋಜನವಾಗುವುದಿಲ್ಲ ಎಂದು ಹೇಳಿ ಈ ಬಿಲ್ಲನ್ನು ವಿರೋಧಿಸುತ್ತಾ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಉಪಾಧ್ಯಕ್ಷರೇ, ಈ ಮಸೂದೆಯನ್ನು ಮಂಡಿಸಿದಂತಹ ಮಾನ್ಯ ಕಾನೂನು ಸಚಿವರ ಬುದ್ಧಿ ಮತಿಗೆ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

Mr. DEPUTY SPEAKER.—The hon'ble member is going too far. The intention of the Bill is to increase the fees.

ಶ್ರೀ ಕೋಣಂದೂರು ಲಿಂಗಪ್ಪ.—ಇದನ್ನು ಸಂಪೂರ್ಣವಾಗಿ ನಾನು ವಿರೋಧಿಸುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆ ಹೇಳಿದೆ ನಮ್ಮ ನ್ಯಾಯಾಂಗ ಪದ್ಧತಿ ಬ್ರಿಟೀಷರ ಕಾಲದಿಂದ ಬಂದದ್ದು. ಆಯಾಯಾ ಇಲಾಖೆಗಳು ಏನು ಇವೆ ಅವು ಸಂಪಾದನೆ ಮಾಡಿಕೊಂಡು ಅವುಗಳ ಕಾರ್ಯ ಮುಂದೆ ಹೋಗಬೇಕು ಎನ್ನುವ ದೃಷ್ಟಿಯಿಂದ ನ್ಯಾಯಕ್ಕೂ ಕೂಡ ಬೆಲೆಯನ್ನು ಇಟ್ಟರು. ಇವೊತ್ತು ಪ್ರಜಾಪ್ರಭುತ್ವ ಪದ್ಧತಿಯಲ್ಲಿ "ಗರೀಬಿ ಹಟಾವೋ" ಎಂದು ಬಡತನ ತೊಲಗಿಸುವ ಇಂದಿರಾಗಾಂಧಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿರುವ ಸಂದರ್ಭದಲ್ಲಿ ರಿಟ್ ಅರ್ಜಿಯ ಬೆಲೆ 25 ರೂಪಾಯಿಂದ 100 ರೂಪಾಯಿಗೆ ಏರಿಸಿ ಬಡತನ ತೊಲಗಿಸುತ್ತೇವೆಂದು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳು ಮಾತನಾಡುವಾಗ ಬೆಲೆ ಹೆಚ್ಚು ಮಾಡುವುದರಿಂದ ಬಡವರಿಗೆ ಕೋರ್ಟು ದೂರಹೋಗುತ್ತದೆ, ಅದುದರಿಂದ ರಿಟ್ ಪಿಟಿಷನ್‌ಗಳು ಕಡಿಮೆಯಾಗುತ್ತವೆ ಎಂದು ಹೇಳಿದರು.

Mr. DEPUTY SPEAKER.—What he said was only incidental.

ಶ್ರೀ ಕೋಣಂದೂರು ಲಿಂಗಪ್ಪ.—ಇದೇ ರೀತಿ ಬಡತನ ತೊಲಗಿಸುವ ಬದಲು ಬಡವನನ್ನು ನ್ಯಾಯದಿಂದ ದೂರ ತೊಲಗಿಸತಕ್ಕಂತ ನೀತಿ ಏನು ಇದೆ ಅದನ್ನು ವಿರೋಧಿಸಬೇಕಾದುದು ಅನಿವಾರ್ಯ. ನ್ಯಾಯ ಮೂಲಭೂತವಾದ ಹಕ್ಕು ಆಗಬೇಕು ಮತ್ತು ಪ್ರತಿಯೊಬ್ಬನಿಗೆ ಕೂಡ ಉಚಿತವಾಗಿ ನ್ಯಾಯ ದೊರಕಬೇಕು. ಯಾವುದೇ ರೀತಿಯಾದ ಶುಲ್ಕವನ್ನು ನ್ಯಾಯಕ್ಕೆ ತೊಡಗಿಸಬಾರದು. ಇದು ಜನತಂತ್ರದ ಸುಸಂಸ್ಕೃತಿಯ ಪದ್ಧತಿ. ಈ ಪದ್ಧತಿಯನ್ನು ಅನುಸರಿಸುವುದಕ್ಕೆ ನೀವು ಪ್ರಯತ್ನ ಮಾಡುವುದಿಲ್ಲ ಗೊತ್ತು. ನಾವೇ ಮಾಡಬೇಕು. ಈ ಜನತಂತ್ರದ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ ಬಂದು 26 ವರ್ಷಗಳು ಆದಮೇಲೂ ಇಂದು 25 ರಿಂದ 100 ರೂಪಾಯಿಗೆ ಏರಿಸತಕ್ಕ ಈ ಒಂದು ಮಸೂದೆಯನ್ನು ತಂದಿದ್ದೀರಿ. ಕಾಂಗ್ರೆಸ್ "ಓ" ತಂದಿದ್ದರೆ ಏನು ಹೇಳಬೇಕಾಗಿತ್ತೋ ಈಗ ತಂದಿರುವವರು "ಆರ್" ನಮ್ಮ ದೃಷ್ಟಿಯಲ್ಲಿ "ಆರ್" ಮತ್ತು "ಓ" ಎರಡೂ ಒಂದೇ. ನ್ಯಾಯ ಸುಲಭವಾಗಿ ಬಡವರಿಗೆ ಸಿಕ್ಕದೆ ಇರುವುದರಿಂದ ಸರ್ಕಾರದವರು ದುಬಾರಿ ನ್ಯಾಯ ಮಾಡಿ ಶ್ರೀಮಂತರಿಗೆ ಮಾತ್ರ ಅದರ ಲಾಭ ಆಗುವಂತೆ ನ್ಯಾಯ ವಿತರಣೆ ಮಾಡುವ ನೀತಿ ಏನು ಇದೆ ಇದನ್ನು ಸಂಪೂರ್ಣವಾಗಿ ವಿರೋಧಿಸಿ ಈ ಬಿಲ್ಲನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಉಪಾಧ್ಯಕ್ಷರೇ, ಬೇಸಿಗೆ ಕಾಲದಲ್ಲಿ ಮಳೆ ಆದರೆ ಸಂತೋಷ ಬರುತ್ತದೆ ಬಿಸಿಲಾದರೂ ಕಡಿಮೆಯಾಗುತ್ತದೆ. ಚಳಿಗಾಲದಲ್ಲಿ ಮಳೆ ಬರುವುದರಿಂದ ಫ್ಲೂ, ಇನ್ಫ್ಲುಯೆಂಜಾ ರೋಗಗಳು ಬರುತ್ತವೆ. ರಬಿ ಕ್ರಾಪ್ ಉಳಿಯುವುದಿಲ್ಲ. ಬಂಡವಾಳಶಾಹಿ ಸಮಾಜದಲ್ಲಿ ಆಗುವಂತಹ ಅನ್ಯಾಯಕ್ಕೆ ನ್ಯಾಯ ದೊರಕಿಸಿಕೊಡುವ ನ್ಯಾಯಾಲಯಕ್ಕೆ ದೇವರಗುಡಿ ಎಂದು ಜನ ನಂಬಿಕೆ ಇಟ್ಟುಕೊಂಡಿದ್ದಾರೆ ನ್ಯಾಯದ ಘಂಟೆ ಬಾರಿಸಿದವರೂ ತಕ್ಕಡಿ ಬಾರ ಹೆಚ್ಚು ಬಿದ್ದಕಡೆ ತೂಗುತ್ತದೆ. ನ್ಯಾಯಾಲಯದಲ್ಲಿ ರಿಟ್ ಹೋದರೆ ನ್ಯಾಯ ಸಿಕ್ಕುತ್ತದೆ ಜೋಕನ್ ಫೀಸ್ ಕೊಡೋಣ ಎಂದು ಇದ್ದೆವು. ಕ್ರೈಸ್ತರನ್ನು ಕೊಲ್ಲುವ ಸಮಯದಲ್ಲಿ ನಿನ್ನ ಭುಜದಲ್ಲಿ ಕ್ರಾಸ್ ಹೊತ್ತುಕೋ ಎಂದು ಹೇಳಿದಂತೆ ಸಾಕ್ಷಿಗಳು ಸುಳ್ಳು ಹೇಳುತ್ತಾರೋ,

(ಶ್ರೀ ಪಿ. ಎನ್. ಪಾಟೀಲ್)

ಖರ ಹೇಳುತ್ತಾರೋ ಕೋರ್ಟ್ ಕೊಟ್ಟಿದ್ದೇ ನ್ಯಾಯ, ನಿನ್ನ ಹೆಗಲಮೇಲೆ ನಿನ್ನ ಕ್ಯಾಸ್ ಹೊತ್ತುಕೊ ಎಂದು ಹೇಳಿದಂತೆ ಇಪ್ಪೊತ್ತು ಪ್ರಗತಿಶೀಲರು ಎಂದು ಹೇಳಿಕೊಂಡು ಬಂದಿರುವವರು ಬಡವರಿಗೆ ಸೊಂಟ ಮುರಿಯುವ ಹಾಗೆ ಮಾಡುತ್ತಿದ್ದಾರೆ. ಇದು ಶುದ್ಧ ಅವಮಾನಕರ. ಕಂದಾಯಮಂತ್ರಿಗಳು ಬಡವನಿಗೆ ನ್ಯಾಯವಾದ ಬಾಗಿಲಿಗೆ ಮುಳ್ಳು ಪಚ್ಚಿಬಿಟ್ಟು ಬಡವ ಕೋರ್ಟಿಗೆ ಹೋಗುವುದಕ್ಕೆ ಸಾಧ್ಯವಿಲ್ಲದಂತೆ ಮಾಡಿದ್ದಾರೆ. ಸಿರಿವಂತನಿಗೆ ನ್ಯಾಯ ಸಿಕ್ಕುತ್ತದೆ, ಬಡವನಿಗೆ ಸಿಕ್ಕುವುದಿಲ್ಲ ಎನ್ನುವ ತತ್ವಕ್ಕೆ ಮನ್ನಣೆ ಕೊಟ್ಟ ಹಾಗಾಗುತ್ತದೆ. ಪ್ರಿಸ್ಟೀಜ್ ಇಷ್ಯೂ ಬರುವಂತೆ ಮಾಡುವುದು ಬೇಡ. ಕಾಂಗ್ರೆಸ್ ಆರ್ ಮಾತನ್ನೆಲ್ಲಾ ಸಪೋರ್ಟ್ ಮಾಡಬೇಕೆಂದಿಲ್ಲ, ನಾವು ಹೇಳುವುದನ್ನು ಎಲ್ಲಾ ಕೇಳಬೇಕೆಂದು ಇಲ್ಲ. ಘನ ಸರ್ಕಾರದವರಿಗೆ ಹೇಳುತ್ತೇನೆ. ರಿಟ್ ಪಿಟಿಷನ್‌ಗೆ ನೂರು ರೂಪಾಯಿ ಮಾಡುವುದರಿಂದ ಹೈಕೋರ್ಟ್ ಬಾಗಿಲಿಗೆ ಮುಳ್ಳು ಹೊಚ್ಚಿದಂತೆ ಆಗಿದೆ. ಜನರು ಕೋರ್ಟಿಗೆ ಏತಕ್ಕೆ ಹೋಗುತ್ತಾರೆ ಎಂದರೆ ನೀವು ಅನ್ಯಾಯ ಮಾಡುವುದರಿಂದ ಹೋಗುತ್ತಾರೆ. ಇಲ್ಲೀಗರ್ ಪ್ರೊಪೋಷನ್ಸ್ ಕೊಡುತ್ತಿದ್ದೀರಿ. ನಿಮ್ಮ ಶಹಸಿರ್ದಾರ್, ಅವರ್ದಾರ್, ನೀವು ಇಷ್ಟಂತಹ ಅಸಿಸ್ಟೆಂಟ್ ಕಮಿಷನರ್ ಸರಿಯಾದ ನ್ಯಾಯ ಕೊಟ್ಟಿಲ್ಲ. ಅವರಮೇಲೆ ಅಫೀರ್ ಪವರ್ ಇಟ್ಟಿಲ್ಲ. ರೈಟ್ ಆಫ್ ರಿವಿಷನ್ ಕೂಡ ಇಲ್ಲ. ಅಸಿಸ್ಟೆಂಟ್ ಕಮಿಷನರ್ ಪಾಸ್ ಮಾಡಿದ ಆರ್ಡರ್‌ಗೆ ಫೈನಲ್ ಆರ್ಡರ್. ಇವೆಲ್ಲಾ ಇಟ್ಟಿದ್ದೀರಿ. ಮೂರು ಎಕರೆ ಸುಲುವಾಗಿ ಜಗಳ ಆಡುವ ರೈತ ಹೈಕೋರ್ಟಿಗೆ ಬರಬೇಕಾಗಿದೆ. ರಿಟ್ ಪಿಟಿಷನ್ 25 ರೂಪಾಯಿ ಇಟ್ಟಿದ್ದುದನ್ನು ಕಡಿಮೆ ಮಾಡಿದ್ದೀರಿ ಬಡ ಜನರಿಗೋಸ್ಕರ ಕಳಕಳಿ ಮತ್ತು ಕನಿಕರ ನಿಮ್ಮಲ್ಲಿ ಇದೆ ಎಂದು ಒಪ್ಪಬೇಕಾಗುತ್ತದೆ. ಕಡಿಮೆ ಮಾಡುವ ಎದೆಗಾರಿಕೆ ನಿಮಗೆ ಇಲ್ಲ. ಕಡಿಮೆ ಮಾಡುವುದಕ್ಕೆ ತಮ್ಮ ನಡಿವ ಸಂಪುಟ ಒಪ್ಪಿಲ್ಲ, ಪಾರ್ಟಿ ಒಪ್ಪಿಲ್ಲ ಎಂದರೆ ಕಡಿಮೆ ಮಾಡುವ ಗೋಜಿಗೆ ಹೋಗದೆ ಇದ್ದರೂ ಇರುವುದನ್ನು ಜಾಸ್ತಿ ಮಾಡುವ ಯೋಚನೆಯನ್ನು ಬಿಡಿ.

ಯಾವ ಭಾಗದಿಂದ ಬಂದರೂ ಸಾವಿರಾರು ಅಪೀಲುಗಳು ಇರುತ್ತವೆ. ಇದ್ದರೂ, ಕೋರ್ಟ್ ಫೀಜು ಕೊಡಲಾರದೆ ಎಷ್ಟೋ ಕೇಸುಗಳು ಡಿಸ್‌ಮಿಸ್‌ಆಗುತ್ತವೆ. ಪ್ರಿಂಟಿಂಗ್ ಚಾರ್ಜಸ್ ಕೊಡುವುದಕ್ಕೆ ಆಗುವುದಿಲ್ಲ. ಕೋರ್ಟಿನವರು 10—15 ಸಾರಿ ಟೈಂ ಕೊಡುತ್ತಾರೆ, ಪ್ರಿಂಟಿಂಗ್ ಚಾರ್ಜಸ್ ಫೈಲ್ ಮಾಡದೆ ಇದ್ದರೆ ಅಪೀಲು ಡಿಸ್‌ಮಿಸ್ ಆಗುತ್ತದೆ; ಏಕೆಂದರೆ ಜನರು ಪ್ರಿಂಟಿಂಗ್ ಚಾರ್ಜಸ್ ಕೊಡುವುದಕ್ಕೆ ಆಗುವುದಿಲ್ಲ.

Sri M. MALLIKARJUNA SWAMY (Minister for Community Development and Social Welfare).—The Hon'ble Member is not holding the brief for the poor.

ಶ್ರೀ ಪಿ. ಎನ್. ಪಾಟೀಲ್.—ಪ್ರಾಪರ್ಟಿ ರೈಟ್ ಪಾಲಿಸಿ ಹೇಳಿ ಬೇಕಾದರೆ I am the first person to hold the brief for you. ಆಸ್ತಿ ಮನುಷ್ಯನಿಗೆ ಸಂಬಂಧಪಟ್ಟಿದ್ದಲ್ಲ, ದೇಶಕ್ಕೆ ಸಂಬಂಧಪಟ್ಟಿದ್ದು. ಕಾನ್‌ಸ್ಟಿಟ್ಯೂಷನ್‌ನ ಚೌಕಟ್ಟಿನಲ್ಲಿ ಕೆಲವು ಹಾಳೆಗಳನ್ನು ಕತ್ತರಿಸುವ ಸುಲುವಾಗಿ ಹೊಸ ಕಾಯಿದೆ ಮಾಡಿ.

Sri M. MALLIKARJUNA SWAMY.—You are not holding brief for the proliterian class.

ಶ್ರೀ ಪಿ. ಎನ್. ಪಾಟೀಲ್.—ಪ್ರೊಲಿಟೆರಿಯನ್ ಕ್ಲಾಸ್ ರಾಜ್ಯ ಬರುತ್ತದೆ, ಅದು ಬಂದ ಸಮಯದಲ್ಲಿ ಸೆಚ್ಚಾಗಿ ಸ್ವಾಗತ ಮಾಡೋಣ. Let us create ways and means for it.

Sri M. MALLIKARJUNA SWAMY.—I am sorry you are not holding brief for the poor.

ಶ್ರೀ ಪಿ. ಎನ್. ಪಾಟೀಲ್.—ಮಂತ್ರಿಗಳು ತಂದಂಥ ಕಾಯಿದೆ ಹೀಗೆ ಇದೆ. ಪೋಲೀಸ್ ಸ್ಟೇಷನ್‌ನಲ್ಲಿ ಹೆಚ್ಚು ಜನ ದೂರು ಹೇಳಿಕೊಳ್ಳುವುದಕ್ಕೆ ಬರುತ್ತಾರೆ, ಕಳುವು ಆಗಿದೆ, ಅಪಮಾನ ವಾಗಿದೆ ಎಂದರೆ ನಾಲ್ಕು ಸಾರಿ ಬಾದು ಬಟ್ಟು ಕಳುಹಿಸಿ ಇನ್ನೊಂದು ಸಾರಿ ಬರುವುದಿಲ್ಲ ಎಂದು ಹೇಳಿದ ಹಾಗೆ ಈ ಕಾಯಿದೆಯನ್ನು ತರುತ್ತಿದ್ದೀರಿ.

Mr. DEPUTY SPEAKER.—It is outside the scope of the Bill.

Sri V. N. PATIL.—It is exactly within the scope. ಕಾಯಿದೆಗಳನ್ನು ಅಮೆಂಡ್‌ಮೆಂಟ್ ಮಾಡಿರಿ, ಅದಕ್ಕೆ ನಾವು ಬೆಂಬಲ ಕೊಡುತ್ತೇವೆ. ಆದರೆ ರೈಟ್ ಆಫ್ ಅಪೀಲ್ ಟು ಹೈಕೋರ್ಟ್ ಪ್ರತಿಯೊಂದಕ್ಕೂ ಇಡಿ. ಇದು ಇಲ್ಲದೆ ಇರುವುದರಿಂದ ಎಕ್ಸ್‌ಟ್ರಾರ್ಡಿನರಿ ರೈಟ್ ಆಫ್ ಜ್ಯುರಿಸ್‌ಡಿಕ್ಷನ್ ಇನ್‌ವೋಕ್ ಮಾಡುತ್ತಿದ್ದೀರಿ. ಆರ್ಡಿನರಿ ರೈಟ್ ಆಫ್ ಅಪೀಲ್‌ಗೆ ರಿವಿಷನ್ ಕೊಟ್ಟರೆ, ಆಗ ರಿಟ್ ಬರುವುದಿಲ್ಲ.

Mr. DEPUTY SPEAKER.—Is it within the scope of the Bill?

Sri V. N. PATIL.—Yes. You are unnecessarily increasing the cost of justice. Why not you bring a modified legislation?

Mr. DEPUTY SPEAKER.—The Hon'ble Member can bring a Resolution if he so desires.

ಶ್ರೀ ವಿ. ಎನ್. ಪಾಟೀಲ್.—ನಾನು ಮಾಡಿಫೈಡ್ ರೆಸಲ್ಯೂಷನ್ ತಂದರೆ, 47 ಕೈಗಳು ಏಳುತ್ತವೆ, ಅವರ ಕಡೆಯಿಂದ ತಂದರೆ 150 ಕೈಗಳು ಏಳುತ್ತವೆ. ರೈಟ್ ಆಫ್ ಅಪೀಲು ಪ್ರೊವೈಡ್ ಮಾಡಿದರೆ, ರಿಟ್ ಜ್ಯುರಿಸ್‌ಡಿಕ್ಷನ್ ವಿಚಾರಿ ಹೋಗುವುದಕ್ಕೆ ಆಗುವುದಿಲ್ಲ. ಕೊನೆಯದಾಗಿ ನಾನು ಕೇಳಿಕೊಳ್ಳುವುದು ಇಷ್ಟೇ, ಈ ಬಿಲ್ ಅನ್ನು ವಿತ್‌ಡ್ರಾ ಮಾಡಿಕೊಳ್ಳಿ, ಆಗ ನಾನು ತಮಗೆ ಜೋಳದ ರೊಟ್ಟಿ ಫೀಸ್ಟ್ ಕೊಡುತ್ತೇನೆ, ಕಾಫಿ ಕೊಡುತ್ತೇನೆ, ಎಲ್ಲಕ್ಕಿಂತ ಹೆಚ್ಚಾಗಿ ತಮಗೆ ಕೈ ಮುಗಿಯುತ್ತೇನೆ. ಈಗ ಇರುವ ಫೀಜು 25 ರೂಪಾಯಿಯನ್ನೇ ಇಟ್ಟುಬಿಡಿ. 100ರೂಪಾಯಿ ಮಾಡಿ ಸೋಷಿಯಲಿಸಂ ಹೆಸರಿಗೆ ಅವಮಾನ ತರಬೇಡಿ; 25 ರೂಪಾಯಿಗಳನ್ನೇ ಇಟ್ಟುಬಿಡಿ ಎಂದು ಹೇಳಿ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಬೈ. ಪಾಟೀಲ್ (ಸಿಂಧಗಿ).—ಮಾನ್ಯ ಸಭಾಪತಿಗಳೇ, ಒಬ್ಬರು ಮಾತನಾಡಿದ್ದನ್ನು ಮತ್ತೊಬ್ಬರು ಮಾತನಾಡಬಾರದು ಎಂದು ಹೇಳಿದರು; ಅನಿವಾರ್ಯವಾಗಿ ವಿರೋಧ ವ್ಯಕ್ತ ಮಾಡುವ ಸಲುವಾಗಿ ಮಾತನಾಡಬೇಕಾಗುತ್ತದೆ. ಸರ್ಕಾರದ ಉತ್ಪನ್ನ ಬೆಳೆಸುವ ಸಲುವಾಗಿ ಕಾಯಿದೆ ತರಬೇಕಾದರೆ, ಬಹು ಜನ ಸಮಾಜಕ್ಕೆ ಉಪಯೋಗವಾಗುವ ಕಾನೂನನ್ನು ತರಬೇಕು. ಯಾರು ಉತ್ತಮ ಸ್ಥಿತಿಯಲ್ಲಿದ್ದಾರೋ ಅವರಿಗೆ ಟ್ಯಾಕ್ಸ್ ಬಿದ್ದರೆ ಪರವಾಗಿಲ್ಲ. ಮನುಷ್ಯನಿಗೆ ಯಾವರೀತಿ ನೀರು ಬೇಕೋ ಅದೇ ರೀತಿ ನ್ಯಾಯ ಎಷ್ಟು ಅತ್ಯಂತ ಸುಲಭವಾಗಿ ಸಾಮಾನ್ಯ ಮನುಷ್ಯನಿಗೆ ಸಿಕ್ಕಬೇಕು. ಈ ದೃಷ್ಟಿಯಿಂದ ನ್ಯಾಯ ದಾನದ ಸುಲಭವಾಗಿ ಅನುಕೂಲವಾಗಿ ಕೊಡಬೇಕು ಟ್ಯಾಕ್ಸ್ ವಗೈರೆ ಕಡಿಮೆ ಮಾಡುವುದನ್ನು ಬಿಟ್ಟು, 25 ರೂಪಾಯಿ ಇದ್ದ ರಿಟ್ ಫೀಜನ್ನು 100 ರೂಪಾಯಿಗೆ ಏರಿಸುತ್ತೇವೆ ಎಂದರೆ ನಮಗೆ ವ್ಯಸನವಾಗುತ್ತದೆ ಮನುಷ್ಯನಿಗೆ ತೊಂದರೆ ಆದಾಗ ರಿಟ್ ಹಾಕತಕ್ಕದ್ದು ಒಂದೇ ಉಪಾಯ. ಸರ್ಕಾರದಿಂದಲಾಗಲೀ, ಯಾರಿಂದಲೇ ಆಗಲೀ ಅನ್ಯಾಯವಾಗುತ್ತಿದ್ದರೆ, ರಿಟ್ ಪಿಟಿಷನ್ ಮೂಲಕ ಸಂರಕ್ಷಣೆ ಪಡೆಯುತ್ತಿದ್ದೆವು ಮತ್ತು ಅನ್ಯಾಯವನ್ನು ಪರಿಹಾರ ಮಾಡಿಕೊಳ್ಳುತ್ತಿದ್ದೆವು. ನ್ಯಾಯ ದೊರಕಿಸಿಕೊಡತಕ್ಕದ್ದು ಕೋರ್ಟ್ ಒಂದೇ. ರಾಜ್ಯಾಂಗ ಘಟನೆಯಲ್ಲಿ ಅವಕಾಶ ಇದ್ದುದರಿಂದ ಭಾರತದಲ್ಲಿ ಪ್ರತಿಯೊಬ್ಬ ಮನುಷ್ಯನೂ ತನ್ನ ಹಕ್ಕು ಭಾಧ್ಯತೆಗಳನ್ನು ಸಂರಕ್ಷಣೆ ಮಾಡಿಕೊಳ್ಳುತ್ತಿದ್ದ. ಮಾನ್ಯ ಪಾಟೀಲರು ಹೇಳಿದಂತೆ, ಇದು ಸಣ್ಣ ಬಿಲ್ ಆದರೂ ಬಹು ಜನರಿಗೆ ತೊಂದರೆಯಾಗುವುದರಿಂದ ಇದನ್ನು ವಾಪಸ್ ತೆಗೆದುಕೊಳ್ಳಬೇಕು. ಸರ್ಕಾರದವರು ರಿಟ್ ಫೀಜನ್ನು ಇನ್ನೂ ಕಡಿಮೆ ಮಾಡಬೇಕು ಎಂದು ಹೇಳಿ ಅಧ್ಯಕ್ಷರು ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಬೈರೇಗೌಡ (ಬೇಮಗಲ್).—ಇವತ್ತಿನದಿವಸ ಮಾನ್ಯ ಮಂತ್ರಿಗಳು ಸಭೆಯ ಮುಂದೆ ಹೈಕೋರ್ಟ್‌ನಲ್ಲಿ ಬೀಳತಕ್ಕ ರಿಟ್‌ಗಳ ಫೀಜನ್ನು 25 ರೂಪಾಯಿಂದ 100 ರೂಪಾಯಿಗೆ ಏರಿಸುವುದಕ್ಕೋಸ್ಕರ ತಂದ ಈ ಮಸೂದೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಇದು ಖಂಡಿತವಾಗಿಯೂ ಸಾಧುವಾದುದು ಅಲ್ಲ ನ್ಯಾಯವಾದುದು ಕೂಡ ಅಲ್ಲ. ಇವತ್ತಿನದಿವಸ ನಮ್ಮ ದೇಶದ ಆರ್ಥಿಕ ಮುಗ್ಗಟ್ಟು ಇದರ ಪರಿಣಾಮವಾಗಿ ಜನ ಉಪಯೋಗಿಸುವ ಪ್ರತಿಯೊಂದು ಸಾಮಾನಿನ ಬೆಲೆಗಳು ಏರುತ್ತಾ ಇರುವ ಪರಿಸ್ಥಿತಿಯಲ್ಲಿ ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ತಂದಿದ್ದಾರೆ.

(ಶ್ರೀ ಸಿ. ಬೈರೇಗೌಡ)

4-30 P.M.

ಮಾನ್ಯ ಮಿತ್ರರು ಹೇಳಿದಹಾಗೆ ಬಡತನ ತೊಲಗಿಸುತ್ತೇವೆಂದು ಹೇಳಿದವರು ಇಂದು ನ್ಯಾಯ ಪಡೆಯಲು ಕೊಡಬೇಕಾದ ಫೀಜನ್ನು ಜಾಸ್ತಿಮಾಡುತ್ತಿದ್ದಾರೆ. ಮಹಾಜನರು ನ್ಯಾಯಕ್ಕೆ ಚ್ಯುತಿ ಬಂದಾಗ, ರಾಜ್ಯಾಂಗದತ್ತವಾಗಿ ಇರುವ ಮೂಲಭೂತ ಹಕ್ಕುಗಳಿಗೆ ಚ್ಯುತಿ ಬಂದಾಗ ಹೈಕೋರ್ಟಿಗೆ ಹೋಗುತ್ತಿದ್ದರು. ಹಾಗೆ ಹೋಗಲು ಮೊದಲು ರಿಟ್ ಹಾಕಬೇಕಾದರೆ 25 ರೂಪಾಯಿ ಫೀಜಿತ್ತು. ಅದನ್ನು ನೂರು ರೂಪಾಯಿಗಳಿಗೆ ಏರಿಸಿರುವುದು ಅವರು ಹೇಳುವುದಕ್ಕೂ ಕಾರ್ಯರೂಪಕ್ಕೆ ತರುವುದಕ್ಕೂ ಇರುವ ವ್ಯತ್ಯಾಸ ನೋಡಿದರೆ ಇದು ತದ್ವಿರುದ್ಧವಾಗಿದೆ. ಆದುದರಿಂದ ದಯೆಯಿಟ್ಟು ಕಾನೂನು ಮಂತ್ರಿಗಳು ತಾವು ತಂದಿರುವ ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಅವರಲ್ಲಿ ವಿನಂತಿ ಮಾಡುತ್ತೇನೆ. ಈಗ ಪೋಲೀಸರ ಸಂಖ್ಯೆ ಜಾಸ್ತಿ ಮಾಡುತ್ತಿದ್ದಾರೆ. ಈಗ ಬೆಲೆಗಳು ಏರಿರುವಾಗ ನ್ಯಾಯಾಂಗದ ಖರ್ಚನ್ನೂ ಹೆಚ್ಚಿಸುತ್ತಿದ್ದಾರೆ. ಹೋದ ವರ್ಷಕ್ಕಿಂತ ಈ ವರ್ಷ ಪೋಲೀಸರಿಗಾಗಿ ಖರ್ಚು ಹೆಚ್ಚಾಗಿದೆ. ಇದನ್ನು ತಡೆಗಟ್ಟಬೇಕು. ಇದೇ ರೀತಿ ಸಕ್ಕರೆ ಬೆಲೆಯನ್ನು ಕೆ.ಜಿ. ಗೆ 15 ಪೈಸೆಯಷ್ಟು ಹೆಚ್ಚಿಸಿದ್ದಾರೆ. ಕೇಂದ್ರದಲ್ಲಿ ಮತ್ತು ಇಲ್ಲಿ ಆಡಳಿತದಲ್ಲಿರುವ ಪಕ್ಷ ಒಂದೇ ಆಗಿದೆ. ಇದು ಬಡತನವನ್ನು ಹೋಗರಾಡಿಸುವುದಾಗಿ ಹೇಳುತ್ತಿರುವಾಗ ಈ ರೀತಿ ಕಾನೂನು ತಂದು ಮಹಾಜನರಿಗೆ ತೊಂದರೆ ಮಾಡುವುದು ಸರಿಯಲ್ಲ. ಅವರ ಮೂಲಭೂತ ಹಕ್ಕುಗಳಿಗೆ ತೊಂದರೆಯಾದಾಗ ಅವರು ಹೈಕೋರ್ಟಿಗೆ ಬರಲು ಈಗ ಫೀ ಹೆಚ್ಚಿಸಿ ಅವಕಾಶವಿಲ್ಲದಂತೆ ಮಾಡಿದ್ದಾರೆ. ಬಡವರಿಗೆ ಹೈಕೋರ್ಟಿನ ಬಾಗಲನ್ನು ಮುಚ್ಚಿ ಬಂಡವಾಳಗಾರರಿಗೆ ಬಾಗಲು ತೆರೆಯಬೇಕು ಎಂಬ ಉದ್ದೇಶದಿಂದ ತಂದಿರುವ ಈ ಬಿಲ್ಲು ಸರಿಯಲ್ಲ, ಇದನ್ನು ವಾಪಸು ಪಡೆಯಬೇಕು ಎಂದು ಸೂಚಿಸಿ ನಾನು ಇದನ್ನು ವಿರೋಧಿಸುತ್ತೇನೆ.

ಶ್ರೀ ಟಿ. ಎಂ. ಮುಂಜುನಾಥ (ತಿಪಟೂರು).—ಮಾನ್ಯ ಉಪಾಧ್ಯಕ್ಷರೇ, ಕಾನೂನು ಮಂತ್ರಿಗಳು ಮಂಡಿಸಿರುವ ಮಸೂದೆ ಸಾಮಾನ್ಯ ಜನರಿಗೆ ಅನುಕೂಲವಾದುದಲ್ಲ ಎಂಬುದು ನನ್ನ ಅಭಿಪ್ರಾಯ. ಏಕೆಂದರೆ ಎಂಥವರಿಗೂ ಕೂಡ ಒಂದಲ್ಲ ಒಂದು ಸಂದರ್ಭದಲ್ಲಿ ನ್ಯಾಯಾಲಯಕ್ಕೆ ಹೋಗಬೇಕಾದ, ರಿಟ್ ಹಾಕಬೇಕಾದ ಸಂದರ್ಭ ಬರುವುದು. ಯಾವುದಾದರೂ ಅನ್ಯಾಯ ವಾದಾಗ ಇರುವ ಒಂದು ಅನ್ವೆಂದರೆ ರಿಟ್. ಅದು ವಿದ್ಯಾರ್ಥಿಗಳಿಂದ ಹಿಡಿದು ನೌಕರರು ಮುಂತಾದವರಿಗೆಲ್ಲಾ ನ್ಯಾಯ ಪಡೆಯಲು ಇರುವ ಒಂದು ಅನ್ವ. ಆದರ ಉಪಯೋಗ ಸಾಮಾನ್ಯ ಜನರು ಪಡೆಯಬೇಕಾದರೆ ಸರಕಾರ ಅದಕ್ಕೆ ತಕ್ಕ ಅವಕಾಶ ಮಾಡಿ ಯಾರಿಗೂ ತೊಂದರೆಯಾಗದ ಹಾಗೆ ನೋಡಿಕೊಳ್ಳಬೇಕಾದ್ದು ಅವಶ್ಯಕ. ಈ ಜವಾಬ್ದಾರಿ ಸರಕಾರದ ಮೇಲಿದೆ. ಆದುದರಿಂದ ಸಮಾಜವಾದವನ್ನು ಬೆಂಬಲಿಸುವ ಮಂತ್ರಿಗಳು ಈ ರೀತಿ ಫೀಜನ್ನು ಏರಿಸುವುದು ಒಂದು ಅಪರಾಧ. ಅವರು ದೊಡ್ಡ ಮನಸ್ಸು ಮಾಡಿ ಬಡವರ ಮೇಲೆ ಅಭಿಮಾನ ಎಟ್ಟು ಕಳಕಳಿಯಿಂದ ತಾವು ತಂದಿರುವ ಬಿಲ್ಲನ್ನು ವಾಪಸು ಪಡೆಯುವುದು ಸೂಕ್ತ. ಈಗ 25 ರಿಂದ 100 ರೂಪಾಯಿಗಳವರೆಗೆ ಕೋರ್ಟ ಫೀಜನ್ನು ಏರಿಸಿರುವುದು ಸರಿಯಲ್ಲ. ನ್ಯಾಯವಾಗಿ ಬಡವರು ರಿಟ್ ಹಾಕಬೇಕಾದರೆ ಅವರಿಗೆ ಫೀಜ್ ಬಾರದು, ಅವರಿಗೆ ಪುಕ್ಕಟ್ಟೆ ಅವಕಾಶವಿರಬೇಕು. ಹಾಗೆ ಮಾಡುವುದನ್ನು ಬಿಟ್ಟು ಈಗ ಏರಿಸಿದ್ದಾರೆ, ಇದು ಯೋಗ್ಯವಲ್ಲ. ಆದುದರಿಂದ ಬಡವರ ಮೇಲೆ ಅಭಿಮಾನವಿಟ್ಟು ಈ ಬಿಲ್ಲನ್ನು ವಾಪಸು ಪಡೆಯಬೇಕೆಂದು ನಾನು ಅವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ಮಂಡಿಸುವಾಗ ನಾನು ಇದರ ಸಾಧಕಬಾಧಕಗಳನ್ನು ತಿಳಿಸಿದ್ದೇನೆ. ಮಾನ್ಯ ಸದಸ್ಯರು ಭಾಷಣ ಮಾಡುವಾಗ ಫೀ ಏರಿಸಿ ಬಡವರ ಮೇಲೆ ಗದಾಪ್ರಹಾರ ಮಾಡುತ್ತಿದ್ದಾರೆ, ಇದರಿಂದ ಬಡವರಿಗೆ ಕೋರ್ಟಿಗೆ ಹೋಗಿ ನ್ಯಾಯ ಪಡೆಯುವ ಸೌಲಭ್ಯ ಸಿಕ್ಕುವುದಿಲ್ಲ ಎಂದು ತಿಳಿಸಿದ್ದಾರೆ. ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಸಾಮಾನ್ಯವಾಗಿ ಬಡವರು ಹಳ್ಳಿಗಾಡುಗಳಲ್ಲಿದ್ದಾರೆ. ಅವರು ತಮ್ಮ ಆಸ್ತಿಯ ಬಗ್ಗೆ ಅಥವ ಹಕ್ಕಿನ ಬಗ್ಗೆ ಕಾನೂನು ಪ್ರಕಾರ ನ್ಯಾಯವನ್ನು ಪಡೆಯುವಾಗ ಸಾಧಾರಣವಾಗಿ ಸಬಾರ್ಡಿನೇಟ್ ಕೋರ್ಟುಗಳಿಗೆ ಹೋಗುವರು. ಹಾಗೆ ಅಲ್ಲಿ ಹೋಗಿ ನ್ಯಾಯವನ್ನು ಪಡೆಯುತ್ತಿದ್ದಾರೆ. ಕಾನ್‌ಸ್ಟಿಟ್ಯೂಷನ್‌ನ 226 ಮತ್ತು 227 ನೆಯ ಅರ್ಟಿಕಲ್ಲುಗಳ ಪ್ರಕಾರ ರಿಟ್ ಹಾಕುವ ಹಕ್ಕು ಬರುವುದು. ಕೆಲವೊಂದು ಜನರಿಗೆ ಮಾತ್ರ ರಿಟ್ ಹಾಕುವ ಸೌಲಭ್ಯದ ಅವಶ್ಯಕತೆ ಇದೆ. ಸಾಮಾನ್ಯವಾಗಿ ಶ್ರೀಮಂತರೇ ಹೆಚ್ಚಾಗಿ ರಿಟ್ ಹಾಕುವರು. ಆದುದರಿಂದ ಈಗ

ಹೆಚ್ಚಿಸಿರುವ ಫೀಜು ಸಾಮಾನ್ಯವಾಗಿ ಶ್ರೀಮಂತರಿಗೇ ಬೀಳುವುದು, ಬಡವರಿಗೆ ಇದರಿಂದ ಅಷ್ಟಾಗಿ ತೊಂದರೆಯಾಗುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರು ಈ ಬಿಲ್ಲನ್ನು ವಾಪಸು ಪಡೆಯಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ. ನಾನು ಪ್ರಾಕ್ಟೀಸ್ ಮಾಡಿ ಅನುಭವ ಪಡೆದಿದ್ದೇನೆ. ಬಡವರಿಗೆ ಇದರ ಬಿಸಿ ತಟ್ಟುವುದಿಲ್ಲ. ಅಲ್ಲದೆ ನೆರೆ ರಾಜ್ಯವಾದ ಆಂಧ್ರ ಪ್ರದೇಶದಲ್ಲಿ ಸಹ ನೂರು ರೂಪಾಯಿ ಫೀಜಿದೆ. ಆದೇ ಪ್ರಕಾರ ಇಲ್ಲೂ ಫೀಜನ್ನು ಏರಿಸಿರುವುದರಿಂದ ಸಣ್ಣಪುಟ್ಟ ವಿಷಯಗಳಿಗೆಲ್ಲಾ ರಿಟ್ ಹಾಕುವ ಹವ್ಯಾಸ, ಪ್ರವೃತ್ತಿ ಜನರಲ್ಲಿ ಕಡಮೆಯಾಗುವುದು. ಬಡವರಿಗೆ ಇದರಿಂದ ಹೆಚ್ಚು ಲಾಭ ದೊರಕದೆ ಹೋಗುವುದು ಎಂಬುದನ್ನು ನಾನು ಒಪ್ಪುವುದಿಲ್ಲ. ಇದಲ್ಲದೆ ಮಾನ್ಯ ಸದಸ್ಯರಾಭ ಶ್ರೀ ಸಾಮಣ್ಣನವರು ಈ ಬಿಲ್ಲಿಗೆ ಒಂದು ತಿದ್ದುಪಡಿ ತಂದಿದ್ದಾರೆ, ಅದರಲ್ಲಿ ಅವರು ಫೀಜನ್ನು 30 ರೂಪಾಯಿವರೆಗೆ ಹೆಚ್ಚಿಸಬಹುದು ಎಂದು ಸೂಚಿಸಿದ್ದಾರೆ. ಆದುದರಿಂದ ಮಾನ್ಯ ಸದಸ್ಯರಿಗೆ ಫೀ ಹೆಚ್ಚುಮಾಡಲು ಒಪ್ಪಿಗೆ ಇದೆ ಎಂದಹಾಗಾಯಿತು. ಆದರೆ ನೂರಲ್ಲ, ಮೂವತ್ತು ರೂಪಾಯಿ ಹೆಚ್ಚಿಸಬಹುದು ಎಂದು ಅವರ ಸೂಚನೆ ಇದೆ. ಇದಕ್ಕೆ ಅಂದರೆ ಹೆಚ್ಚಿಸಲು ಅವರು ಒಪ್ಪಿದ್ದಾರೆ. ಆದುದರಿಂದ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ನರಕಾರದವರು ತಂದಿರುವ ಈ ಮಸೂದೆಗೆ, ಯೋಗ್ಯವಾದ ಸಂದರ್ಭದಲ್ಲಿ ನ್ಯಾಯ ದೊರಕಲಿ ಎಂದು ತಂದಿರುವ ಈ ವಿಧೇಯಕಕ್ಕೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕು ಎಂದು ಅವರಲ್ಲಿ ವಿನ್ನಹ ಮಾಡಿಕೊಳ್ಳುತ್ತೇನೆ.

Mr. DEPUTY SPEAKER.—Now I will put the motion to the House. The question is :

"That The Mysore Court Fees and Suits Valuation (Amendment) Bill, 1972, be taken into consideration."

The motion was adopted.

Clause 2

Mr. DEPUTY SPEAKER.—We will now take up clauses.

The question is :

"That clause 2 do stand part of the Bill."

Hon'ble Member Sri T. R. Shamanna to move his Amendment to this clause.

Sri T. R. SHAMANNA (Fort).—I beg to move the following Amendment :

"That at page 2, clause 2, line 4 for the proposed words "one hundred rupees" the words "thirty rupees" shall be substituted."

Mr. DEPUTY SPEAKER.—Amendment moved :

"That at page 2, clause 2, line 4 for the proposed words "one hundred rupees" the words "thirty rupees" shall be substituted."

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಪತಿಗಳೇ, ರಿಟ್ಟಿಗೆ ಸಂಬಂಧಪಟ್ಟ ಹಾಗೆ ಸ್ಟ್ಯಾಂಪ್ ಫೀಜು ಮೊದಲು 2 ರೂಪಾಯಿ ಇತ್ತು. ಅದನ್ನು 25 ರೂಪಾಯಿ ಮಾಡಿದರು. ಈಗ ಇಂದಿರಾ ಸರಕಾರ ಬಂದ ಮೇಲೆ 100 ರೂಪಾಯಿಗಳಿಗೆ ಏರಿಸುತ್ತಿದ್ದಾರೆ. ಮಾನ್ಯ ಸದಸ್ಯರನೇಕರು ಈ ಫೀಜನ್ನು ಏರಿಸಬಾರದೆಂದು ಹೇಳಿದ್ದಾರೆ. ನಾನು ನನ್ನ ತಿದ್ದುಪಡಿಯಲ್ಲಿ 30 ರೂಪಾಯಿ ಎಂದು ಸೂಚಿಸಿದ ಮಾತ್ರಕ್ಕೆ ಫೀಜನ್ನು ಹೆಚ್ಚಿಸಲು ಮಾನ್ಯ ಸದಸ್ಯರ ಒಪ್ಪಿಗೆ ಇದೆಯೆಂದು ಮಂತ್ರಿಗಳು ಹೇಳುವುದು ಸರಿಯಲ್ಲ. ನಾನು ನನ್ನ ತಿದ್ದುಪಡಿಯಲ್ಲಿ ಈ ಫೀಜನ್ನು 30 ರೂಪಾಯಿಗಳಿಗೆ ಏರಿಸಿ ಎಂದು ಹೇಳಿರುವುದಕ್ಕೆ ಕಾರಣ ಇಷ್ಟೇ. ಇತ್ತೀಚೆಗೆ ಹೈಕೋರ್ಟಿನಲ್ಲಿ

(ಶ್ರೀ ಟಿ. ಆರ್. ಶಾಮಣ್ಣ)

ಕೆಲಸಮಾತಕ್ಕ ಕ್ಲಾರ್ಕ್ ಇತ್ಯಾದಿಯವರಿಗೆಲ್ಲಾ ಸಂಬಳಸಾರಿಗೆಗಳನ್ನು ಸರ್ಕಾರದವರು ಜಾಸ್ತಿ ಮಾಡಿದ್ದಾರೆ. ಅದನ್ನು ಭರ್ತಿಮಾಡಿಕೊಳ್ಳಲು ಇಷ್ಟು ಮಾತ್ರ ಇದನ್ನು ಹೆಚ್ಚುಮಾಡಬಹುದೆಂದು ನಾನುಸೂಚಿಸಿದ್ದೇನೆ. ಇಷ್ಟನ್ನೂ ಹೆಚ್ಚುಮಾಡುವುದೇ ಬೇಡ ಇದನ್ನು ಸಂಪೂರ್ಣವಾಗಿ ರದ್ದು ಮಾಡಿ ಎಂದು ತಿದ್ದುಪಡಿಯನ್ನು ಕಳುಹಿಸಿದ್ದರೆ ಅದು ನೆಗೆಟೀವಾಗಿಬಿ ಎಂದು ಹೇಳಿ ಅವನ್ನು ತಾವು ತಳ್ಳಿ ಹಾಕಬಹುದೆಂದು ನಾನು ನಾಮಕಾವಾಸ್ತೆ ಈ ಹೆಚ್ಚುವರಿಯನ್ನು ಸೂಚಿಸಿ ಇದನ್ನು ತಂದಿದ್ದೇನೆ. ಇದನ್ನು ನೂರು ರೂಪಾಯಿಗಳಿಗೆ ಹೆಚ್ಚು ಮಾಡಿದ್ದರೆ ಇದರಿಂದ ಶ್ರೀಮಂತರಿಗೆ ಅನುಕೂಲ ಮಾಡಿದ ಹಾಗೆ ಆಗುತ್ತದೆಂದು ಮಾನ್ಯ ಮಂತ್ರಿಗಳೇನು ಹೇಳಿದರು ಅದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ.

†ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಉಪಾಧ್ಯಕ್ಷರೇ, ಈ ತಿದ್ದುಪಡಿಯ ವಿಚಾರದಲ್ಲಿ ನಾನು ಈಗಾಗಲೇ ಹೇಳಿದ ಹಾಗೆ ಮಾನ್ಯ ಸದಸ್ಯರು ಈ ಫೀಜನ್ನು ಹೆಚ್ಚು ಮಾಡಬೇಕೆಂಬ ತತ್ವವನ್ನು ಒಪ್ಪಿಕೊಂಡಿದ್ದಾರೆ. ಅದು ಐದು ರೂಪಾಯಿ ಇರಲಿ ಅಥವಾ ಅದು ಎಷ್ಟೇ ಇರಲಿ. ಹೆಚ್ಚು ಮಾಡುವುದು ನೂಕ್ತ ಎಂಬ ತತ್ವವನ್ನು ಅವರು ಒಪ್ಪಿದಂತಾಗಿದೆ. ಅವರು ಈಗಿನ ಪರಿಸ್ಥಿತಿಗೆ ೬ ರೂಪಾಯಿಗಳನ್ನು ಹೆಚ್ಚಿಸುವುದು ಸಾಕೆಂಬುದಾಗಿ ಅವರು ಒಪ್ಪಿಕೊಂಡಿದ್ದಾರೆ. ಇದನ್ನು ಐದಕ್ಕೆ ಹೆಚ್ಚಿಸಬೇಕೇ—ಅಥವಾ ನೂರಕ್ಕೆ ಹೆಚ್ಚಿಸಬೇಕೇ ಎಂಬ ವಿಚಾರಕ್ಕೆ ಬಂದರೆ ನಮ್ಮ ನೆರೆ ರಾಜ್ಯವಾದ ಆಂಧ್ರದಲ್ಲಿ ಇದನ್ನು ನೂರಕ್ಕೆ ಹೆಚ್ಚಿಸಿದ್ದಾರೆ. ಆದ್ದರಿಂದ ಐದು ರೂಪಾಯಿಗೆ ಹೆಚ್ಚಿಸತಕ್ಕದ್ದು ಈಗಿನ ಸಂದರ್ಭಕ್ಕೆ ನೂಕ್ತವಲ್ಲ ಎಂಬುದು ನನ್ನ ಅಭಿಪ್ರಾಯ. ಆದಕಾರಣ ಮಾನ್ಯ ಸದಸ್ಯರು ತಮ್ಮ ತಿದ್ದುಪಡಿಯನ್ನು ದಯವಿಟ್ಟು ವಾಪಸ್ ತೆಗೆದುಕೊಳ್ಳಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ.

Mr. DEPUTY SPEAKER.—I will put the Amendment to the vote of the House. The question is:

"That on page 2 in Clause 2 in line 4 for the proposed words. "One hundred rupees" the words "thirty rupees" shall be substituted."

The Amendment was negatived.

Mr. DEPUTY SPEAKER.—The question is:

"That Clause 2 do stand part of the Bill."

Sri T. R. SHAMANNA.—I press for a division.

The House divided.

Mr. DEPUTY SPEAKER.—The result of the division is:

Ayes: 50; Noes: 19. The "Ayes" have it.

The motion was adopted.

Clause 2 was added to the Bill.

Clause 1, etc.

Mr. DEPUTY SPEAKER.—The question is:

"That Clause 1, the long Title the Preamble and the Enacting Formula do stand part of the Bill."

The motion was adopted.

Clause 1, the long Title, the Preamble and the Enacting Formula were added to the Bill.

Motion to pass.

Sri D. K. NAIKAR.—Sir, I move :

"That the Mysore Court Fees and Suits Valuation (Amendment) Bill, 1972, be passed."

Mr. DEPUTY SPEAKER.—The question is :

"That the Mysore Court Fees and Suits Valuation (Amendment) Bill, 1972, be passed."

The motion was adopted and the Bill was passed.

MYSORE KHADI AND VILLAGE INDUSTRIES (AMENDMENT) BILL, 1972.

Motion to consider

Sri S. M. KRISHNA (Minister for Industries).—Sir, I beg to move :

"That the Mysore Khadi and Village Industries (Amendment) Bill, 1972, be taken into consideration."

Mr. DEPUTY SPEAKER.—Motion moved :

"That the Mysore Khadi and Village Industries (Amendment) Bill, 1972, be taken into consideration."

Sri C. M. ARUMUGAM.—May I submit to you Mr. Deputy Speaker, we have not received copies of the Bill.

Mr. DEPUTY SPEAKER.—All the Bills have been sent by post to the residences of Members. In fact. I got it by post. Some of them have been circulated here. I have taken up because I was convicted.

Sri C. M. ARUMUGAM.—When the Assembly is in Session, it would not be relevant to send any papers to the residences of Members. We have not received it.

Sri K. N. VEERAPPA GOWDA.—We have received copies by post.

Sri C. M. ARUMUGAM.—He might have received it. But some of us have not received it ; and in order to have full fledged discussion on this Bill, I would suggest that we adjourn today and meet tomorrow for this purpose and in the meantime this Bill could be supplied to us. If I do not have a copy of the Bill, I cannot speak on that. Now I am receiving it. I leave it to you Mr. Deputy Speaker.